ಇಂದು ದಿನಾಂಕ:14.03.2024 ರಂದು ಪಿಡಬ್ಲೂ-1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ:** ವಾದಿಯ ಪರ ಶ್ರೀ ಹೆಚ್.ಎಸ್.ಆರ್ ರವರ ಪರವಾಗಿ ಶ್ರೀ ಯು.ಎಲ್.ಎಸ್. ವಕೀಲರಿಂದ:

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ಪಹಣಿ ಪತ್ರಿಕೆಯನ್ನು ನಿಪಿ-4,
2. ಮುಟೇಶನ್ ರಿಜಿಸ್ಟರ್ ನ ದೃಢೀಕೃತ ಪ್ರತಿಯನ್ನು ನಿಪಿ-5,
3. ದಿನಾಂಕ.24.06.1971 ರ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ನಿಪಿ-6,
4. ಪಹಣಿ ಪತ್ರಿಕೆಯ ದೃಢೀಕೃತ ಪ್ರತಿಯನ್ನು ನಿಪಿ-7,
5. ಗ್ರಾಮ ನಮೂನೆ-2 ದೃಢೀಕೃತ ಪ್ರತಿಯನ್ನು ನಿಪಿ-8,
6. ಪಹಣಿ ಪತ್ರಿಕೆಯನ್ನು ನಿಪಿ-9,
7. ಪಹಣಿ ಪತ್ರಿಕೆಯ ದೃಢೀಕೃತ ಪ್ರತಿಯನ್ನು ನಿಪಿ-10,
7. ಆರು ಕಂದಾಯ ಪಾವತಿ ರಶೀದಿಗಳನ್ನು ನಿಪಿ-11 ರಿಂದ 16,
8. ಅಸಲು ದಾವಾ ಸಂ.50/2023 ರ ಆರ್ಡರ್ ಶೀಟ್, ವಾದ ಪತ್ರ ಮತ್ತು ಐ.ಎ ನಂ.1 ರ ದೃಢೀಕೃತ ಪ್ರತಿಗಳನ್ನು ನಿಪಿ-17 ರಿಂದ 19,
9. ಅಸಲು ದಾವಾ ಸಂ.60/2010 ರ ಆರ್ಡರ್ ಶೀಟ್, ವಾದ ಪತ್ರ ಮತ್ತು 1 ನೇ ಪ್ರತಿವಾದಿಯ ಪ್ರತಿವಾದ ಪತ್ರದ ದೃಢೀಕೃತ ಪ್ರತಿಗಳನ್ನು ನಿಪಿ-20 ರಿಂದ 22 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ .

**ಪಾಟೀ ಸವಾಲು:** ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ. ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ